ದೇವರು ಮೊದಲು ಜೀವ್ನಾಣಿಗಳನ್ನೂ, ಪಕ್ಷಿಗಳನ್ನೂ, ಪ್ರಾಣಿಗಳನ್ನೂ ಪ್ರಪಂಚಕ್ಕೆ ತಂದಾಗ ಎಲ್ಲವೂ ಶಾಂತರೀತಿಯಲ್ಲಿ ಒಟ್ಟಾಗಿ ಇದ್ದವು ಎಂದು ನಮಗೆ ತಿಳಿದಿದೆ.

ಬೇಡವಾದ ಯಾವುದೂ ಇರುವುದಿಲ್ಲ. ನೀನು ಅಲ್ಲಿ ಇರಲು ಇಚ್ಛಿಸುತ್ತಿಯೋ? •

# ಸಮಾನತೆಯ ಪಾಠ

ಅದೊಂದು ಆಟದ ಸ್ಪರ್ಧೆಯ ಮೈದಾನ. ಟ್ರ್ಯಾಕ್ ಮೇಲೆ 8 ಮಕ್ಕಳು ಓಟದ ಸ್ಪರ್ಧೆಗೆ ಸಿದ್ಧರಾಗಿ ನಿಂತಿದ್ದರು.

ರೆಡಿ......ಸ್ಟೆಡಿ..... ಗೋ !!!

ಎಂಟು ಹುಡುಗಿಯರು ಓಟ ಆರಂಭಿಸಿದರು.



ಇನ್ನೂ ಹತ್ತು – ಹದಿನೈದು ಹೆಜ್ಜೆ ಓಡುವಷ್ಟರಲ್ಲೇ, ಅವರಲ್ಲಿದ್ದ ಚಿಕ್ಕವರಲ್ಲಿ ಒಬ್ಬಳು ಜಾರಿ, ನೆಲಕ್ಕೆ ಬಿದ್ದು ಬಿಟ್ಟಳು. ತರಚಿದ ಗಾಯಗಳಿಂದ ಅವಳು ಜೋರಾಗಿ ಅಳಲಾರಂಭಿಸಿದಳು. ಉಳಿದ 7 ಮಕ್ಕಳು ಅವಳ ಅಳು ಕೇಳಿ ನಿಂತು ಬಿಟ್ಟರು. ಸ್ವಲ್ಪ ತಡೆದು, ತಿರುಗಿಕೊಂಡು ನೋಡಿದರು. ಆ ಹುಡುಗಿ ಬಿದ್ದದ್ದನ್ನು ಕಂಡ ಅವರೆಲ್ಲರೂ, ಸಹಾಯಕ್ಕಾಗಿ ಹಿಂತಿರುಗಿ ಓಡಿದರು.

ಒಬ್ಬಾಕೆ ಅವಳನ್ನು ಮೆಲ್ಲನೆ ಮೇಲಕ್ಕೆತ್ತಿ, ಆಲಿಂಗಿಸಿ, ಸಂತೈಸಿದಳು. ಎಲ್ಲರೂ ಒಟ್ಟಾಗಿ ಅವಳನ್ನು ಸಂತೈಸಿ, ನೋವಾಗುತ್ತಿದೆಯಾ ಎಂದು ವಿಚಾರಿಸಿದರು.

ಇಬ್ಬರು ಎರಡೂ ಬದಿಯಿಂದ ಅವಳ ಕೈ ಹಿಡಿದುಕೊಂಡರು. ಉಳಿದವರೂ ಕೈಗೆ ಕೈ ಸೇರಿಸಿ, ಜಯದ ರೇಖೆಯ ಕಡೆಗೆ ನಡೆಯಲಾರಂಭಿಸಿದರು......

ಪ್ರೇಕ್ಷಕರ ಮಧ್ಯೆ, ಸೂಜಿ ಬಿದ್ದರೂ ಕೇಳುವಷ್ಟು ಮೌನ! ಕ್ರೀಡಾಧಿಕಾರಿಗಳು ದಂಗುಬಡೆದು ನಿಂತಿದ್ದರು!

ಮೆಲ್ಲ ಮೆಲ್ಲನೆ ಪ್ರಾರಂಭಗೊಂಡ ಚಪ್ಪಾಳೆ ಇಡೀ ಸಭಾಂಗಣವನ್ನು ಆವರಿಸಿ, ಪ್ರೇಕ್ಷಕರೆಲ್ಲರೂ ಎದ್ದು ನಿಂತು ಗೌರವ ಸೂಚಿಸಿದರು. ಎಷ್ಟೋ ಜನರ ಕಣ್ಣುಗಳು ತುಂಬಿ ಬಂದಿದ್ದುವು. ಹೌದು! ಇದು ಇತ್ತೀಚೆಗೆ ಹೈದರಾಬಾದಿನಲ್ಲಿ ನಡೆದ ಘಟನೆ ! "National Institute of Mental Health" ಸಂಘಟನೆಯು ಮಾನಸಿಕವಾಗಿ ಹಿಂದುಳಿದ ಮಕ್ಕಳಿಗಾಗಿ ನಡೆಸಿದ ಕ್ರೀಡಾ ಸ್ಪರ್ಧೆಗಳಲ್ಲಿ ನಡೆದ ಘಟನೆ.

ಜಗತ್ತಿಗೆ ಈ ಮಕ್ಕಳು ಏನನ್ನು ಸಾರಿದರು? ಮನುಷ್ಯತ್ವ? ಒಗ್ಗಟ್ಟು? ಸಮಾನತೆ?....

ಜೀವನದಲ್ಲಿ ಗೆಲುವನ್ನು ಸಾಧಿಸಿದವರು, ಹಿಂದುಳಿದ ವರು ಮುಂದೆ ಬರುವಂತೆ ಸಹಾಯಿಸುವರೆ? ನಾವು ಇದನ್ನೇಕೆ ಮಾಡುವುದಿಲ್ಲ? ಏಕೆಂದರೆ, ನಮಗೆ ಜ್ಞಾನವಿದೆ! ಮಾತುಗಳಿಗಿಂತಲೂ ಕಾರ್ಯವು ಹೆಚ್ಚಾಗಿ ಪ್ರವರ್ತಿಸುತ್ತದೆ!

(ಅಬ್ದುಲ್ ಕಲಾಂರವರ ಒಂದು ಅನುಭವ)

ಸಂಗ್ರಹ : ಸುನಯನ ವಾಲ್ಟರ್ಸ್